# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

## ೨೦೧೪ – ೨೦೧೫ ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ

## ಹಾಗೂ

## ನೂತನ ಪಠ್ಯಕ್ಕೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅಳವಡಿಕೆ

# ವಿಷಯ : ಕನ್ನಡ

# ಮೌಲ್ಯಮಾಪನದ ಪ್ರಮುಖಾಂಶಗಳು

- ಮೌಲ್ಯಮಾಪನವನ್ನು ಆಂತರಿಕ ಮತ್ತು ಬಾಹ್ಯ ಪರೀಕ್ಷೆಗಳೆಂಬ ಎರಡು ಬಗೆಯಲ್ಲಿ ನಡೆಸಲಾಗುವುದು.
- ಆಂತರಿಕ ಮೌಲ್ಯಮಾಪನವು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ್ದಾಗಿದೆ.
- ಬಾಹ್ಯ ಪರೀಕ್ಷೆಯು ಮಂಡಳಿಯು ನಡೆಸುವ ಪಬ್ಲಿಕ್ ಪರೀಕ್ಷೆಯಾಗಿರುತ್ತದೆ.
- ಆಂತರಿಕ ಮೌಲ್ಯಮಾಪನದಲ್ಲಿ ಪ್ರತೀ ರೂಪಣಾತ್ಮಕ ಮೌಲ್ಯಮಾಪನವು ೫೦ ಅಂಕಗಳಿರುವಂತೆ ವರ್ಷದ ನಾಲ್ಕು ರೂಪಣಾತ್ಮಕ ಮೌಲ್ಯಮಾಪನಗಳಿಂದ ಒಟ್ಟಾರೆ ೨೦೦ ಅಂಕಗಳಿಂದ, ಪ್ರಥಮ ಭಾಷೆಗೆ ೨೫ ಕ್ಕೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗೆ ೨೦ ಕ್ಕೆ ನಿಗದಿಗೊಳಿಸಲಾಗುವುದು.
- ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ೫೦ ಅಂಕಗಳಲ್ಲಿ, ೩೦ ಅಂಕಗಳು ಸಿ.ಸಿ.ಇ. ಯ ಎರಡು ಚಟುವಟಿಕೆಗಳಿಂದಲೂ, ೨೦ ಅಂಕಗಳು ಸಾಧನ ಪರೀಕ್ಷೆಯಿಂದಲೂ ಕೂಡಿರುತ್ತವೆ.
- ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಅವಧಿಯಲ್ಲಿ ಕಲಿಕೆಗೆ ನಿಗದಿಪಡಿಸಿಕೊಂಡ ಘಟಕಗಳಿಗೆ ಪೂರಕವಾಗಿ ರೂಪಿಸಿಕೊಂಡ ಯಾವುದಾದರೂ ಎರಡು ಚಟುವಟಿಕೆಗಳಿಗೆ ತಲಾ ೧೫ ಅಂಕಗಳಂತೆ ೩೦ ಅಂಕಗಳಿಗೆ ಚಟುವಟಿಕೆ ನಡೆಯುವುದು.
- ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಅವಧಿಯಲ್ಲಿ ಕಲಿಕೆಯ ಒಟ್ಟಾರೆ ಘಟಕಗಳಿಗೆ ಸಾಧನಾ ಪರೀಕ್ಷೆಯನ್ನು ಭಾಷಾ ಕೌಶಲಗಳಿಗನುಗುಣವಾಗಿ ಕೈಗೊಳ್ಳಲಾಗುವುದು.
- ಆಂತರಿಕ ಮೌಲ್ಯಮಾಪನದ ಅಂಕಗಳಲ್ಲಿ ಪ್ರಥಮ ಭಾಷೆಗೆ ೨೫ ಮತ್ತು ದ್ವಿತೀಯ ಹಾಗೂ ತೃತೀಯ ಭಾಷೆಯಲ್ಲಿ ೨೦ ಅಂಕಗಳನ್ನು ಒಳಗೊಂಡಿರುತ್ತದೆ.
- ಬಾಹ್ಯ ಪರೀಕ್ಷೆಯು ಪ್ರಥಮ ಭಾಷೆಗೆ ೧೦೦ ಅಂಕಗಳಿಗೂ ದ್ವಿತೀಯ ಹಾಗೂ ತೃತೀಯ ಭಾಷೆಗಳಲ್ಲಿ ೮೦ ಅಂಕಗಳಿಗೆ ಪರೀಕ್ಷೆಯನ್ನು ನಡೆಸಲಾಗುವುದು.
- ನೂತನ ಪಠ್ಯಕ್ಕೆ ಸಿ.ಸಿ.ಇ. ಅಳವಡಿಕೆಯಾಗಿದ್ದು, 'ಬಿ' ವಿಭಾಗವು ಗ್ರೇಡ್‌ಗಳಿಂದ ಕೂಡಿರುತ್ತದೆ.

# ಶಿಕ್ಷಕರಿಗೆ ಸಲಹೆಗಳು

ಮೇಲಿನ ಅಂಶಗಳನ್ನು ಭಾಷಾ ಶಿಕ್ಷಕರು ಸಮಗ್ರವಾಗಿ ಅಧ್ಯಯನ ನಡೆಸಿ, ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗುವಂತೆ ಕಲಿಕಾಂಶಗಳನ್ನು ಪ್ರೋತ್ಸಾಹಿಸುವುದು.

ಆಂತರಿಕ ಮೌಲ್ಯಮಾಪನದಲ್ಲಿ ಈಗಾಗಲೇ ನೀಡಿರುವ ಚಟುವಟಿಕೆಗಳಲ್ಲಿ ಮಕ್ಕಳ ಕಲಿಕೆ, ಮನೋಧರ್ಮ, ಪರಿಸರಗಳಿಗನುಗುಣವಾಗಿ ಚಟುವಟಿಕೆಗಳನ್ನು ನಡೆಸಿ ಮಗುವಿನಲ್ಲಿ ನಿರಂತರ ಮತ್ತು ಗುಣಾತ್ಮಕ ಕಲಿಕೆಯಾಗಲು ಪ್ರೋತ್ಸಾಹಿಸುವುದು.

ಈಗಾಗಲೇ ಮಾರ್ಗದರ್ಶಿಯಲ್ಲಿ ನೀಡಿರುವ ಮಾದರಿ ಚಟುವಟಿಕೆಗಳನ್ನು ಅನುಸರಿಸುವುದು ಸೂಕ್ತ. ಜೊತೆಗೆ ಶಿಕ್ಷಕರು ಇಲ್ಲಿ ಸಾರ್ವಭೌಮರಾಗಿರುತ್ತಾರೆ. ಆಂತರಿಕ ಮೌಲ್ಯಮಾಪನವನ್ನು ನಿರ್ಧರಿಸುವ ಸಂದರ್ಭದಲ್ಲಿ ಪ್ರಾಮಾಣಿಕತೆ ಮುಖ್ಯವಾಗಿರುವುದಲ್ಲದೆ ಯಾವುದೇ ವಿದ್ಯಾರ್ಥಿಯು ಮಾನಸಿಕ ತುಮುಲತೆಗೆ ಒಳಗಾಗದಂತೆ ಶಿಕ್ಷಕರು ಕಾರ್ಯನಿರ್ವಹಿಸಿದಾಗ ಮಾತ್ರ ಆಂತರಿಕ ಮೌಲ್ಯಮಾಪನವು ಅರ್ಥಪೂರ್ಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಂಡಳಿ ನೀಡಿರುವ ಚಟುವಟಿಕೆಗಳನ್ನು ಬಳಸಿಕೊಳ್ಳಲು ಭಾಷಾ ಶಿಕ್ಷಕರು ಸರ್ವ ಸ್ವತಂತ್ರರಾಗಿರುತ್ತಾರೆ.

ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆ ೧೦೦ ಅಂಕಗಳನ್ನೂ, ದ್ವಿತೀಯ ಭಾಷೆ ೮೦ ಅಂಕಗಳನ್ನೂ, ತೃತೀಯ ಭಾಷೆಯೂ ೮೦ ಅಂಕಗಳನ್ನು ಒಳಗೊಂಡಿರುತ್ತದೆ.

ಪ್ರಶೆಪತ್ರಿಕೆಯು  ಮೂರು ವಿಭಾಗಗಳಿಂದ ಕೂಡಿದ್ದು, 'ಎ' ವಿಭಾಗವು ಗದ್ಯ, ಪದ್ಯ, ಪಠ್ಯಪೋಷಕ ಅಧ್ಯಯನಗಳಿಂದ ಕೂಡಿದೆ. ಈ ಭಾಗದಲ್ಲಿ ೬೭ ಅಂಕಗಳಿರುತ್ತವೆ. ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸುಗಳ ೨೦ ಅಂಕಗಳಿಗೂ, 'ಸಿ' ವಿಭಾಗವು 'ವಾಕ್ಯ ರಚನೆ ಹಾಗೂ ಬರೆವಣಿಗೆ ಕೌಶಲ'ವನ್ನುಳ್ಳ ೧೩ ಅಂಕಗಳಿಂದ ಕೂಡಿ, ಪ್ರಶ್ನೆಪತ್ರಿಕೆಯು ಸಮಗ್ರ ಮೂರು ವಿಭಾಗಗಳಿಂದ ವಿದ್ಯಾರ್ಥಿಯ ಭಾಷಾ ಕೌಶಲಗಳನ್ನು ಅಳೆಯಲು ಸಹಾಯಕವಾಗಿರುತ್ತದೆ.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

# ಮಲ್ಲೇಶ್ವರಂ, ಬೆಂಗಳೂರು – 3

## 2014-15 ನೇ ಸಾಲಿನ  ನೂತನ ಪಠ್ಯಾಧಾರಿತ ಎಸ್.ಎಸ್.ಎಲ್.ಸಿ. ಪರೀಕ್ಷೆ

## ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

## ವಿಷಯ : ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

## ವಿಷಯ : ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 3 ಗಂಟೆಗಳು**

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 30 | 30 |
| ಗ್ರಹಿಕೆ | 34 | 34 |
| ಅಭಿವ್ಯಕ್ತಿ | 32 | 32 |
| ಪ್ರಶಂಸೆ | 04 | 04 |
| ಒಟ್ಟು | 100 | 100 |

**2.ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 30 | 30 | 14 |
| ಪದ್ಯ | 30 | 30 | 12 |
| ಪಠ್ಯ ಪೋಷಕ ಅಧ್ಯಯನ | 07 | 07 | 05 |

| | | | |
|---|---|---|---|
| ವ್ಯಾಕರಣಾಂಶಗಳು,ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 33 | 33 | 19 |
| ಒಟ್ಟು | 100 | 100 | 50 |

3 ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತುನಿಷ್ಠ | 14 | 14 | 14 | 25 ನಿಮಿಷಗಳು |
| ಕಿರು ಉತ್ತರಗಳು (1) | 11 | 11 | 11 | 15 ನಿ. |
| ಕಿರು ಉತ್ತರಗಳು (2) | 18 | 18 | 09 | 38 ನಿ. |
| ದೀರ್ಘ ಉತ್ತರಗಳು (1) | 27 | 27 | 09 | 40 ನಿ. |
| ದೀರ್ಘ ಉತ್ತರಗಳು (2) | 20 | 20 | 05 | 22 ನಿ. |
| ದೀರ್ಘ ಉತ್ತರಗಳು (3) | 10 | 10 | 02 | 20 ನಿ. |
| ಒಟ್ಟು | 100 | 100 | 50 | 160 + 20 ನಿಮಿಷಗಳು |

4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% | 50% | 20% | 100 % |

5 . ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 14 ಪ್ರಶ್ನೆಗಳು | 14 * 1 = 14 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 11 ಪ್ರಶ್ನೆಗಳು | 11 * 1 = 11 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 9 ಪ್ರಶ್ನೆಗಳು | 9 * 2 = 18 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 9 ಪ್ರಶ್ನೆಗಳು | 9 * 3 = 27 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 5 ಪ್ರಶ್ನೆಗಳು | 5 * 4 = 20 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 5 ಅಂಕಗಳ 2 ಪ್ರಶ್ನೆಗಳು | 2 * 5 = 10 |
| ಒಟ್ಟು | 50 ಪ್ರಶ್ನೆಗಳು | 100 ಅಂಕಗಳು |

6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

ಗದ್ಯ : 30, ಪದ್ಯ : 30, ಪಠ್ಯ ಪೋಷಕ ಅಧ್ಯಯನ : 07,

ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 33

ಒಟ್ಟು : 100 ಅವಧಿ : 3 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ | ಒಟ್ಟು |
|---|---|---|---|---|---|---|
| 1. ಬಹು ಆಯ್ಕೆ | – | – | – | 10 * 1 = 10 | – | 10 |
| 2. ಸಂಬಂಧೀಕರಿಸಿ ಬರೆಯುವುದು | – | – | – | 4 * 1 = 4 | – | 04 |

| | | | | | | |
|---|---|---|---|---|---|---|
| 3. ಒಂದು ವಾಕ್ಯದ ಉತ್ತರಗಳು | 5∗1=05 | 3∗1=03 | 3∗1=3 | – | – | 11 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4∗2=8 | 3∗2=6 | 2∗2=04 | – | – | 18 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 2∗3=06 | 2∗3=06 | – | – | – | 12 |
| 6. ಕವಿ ಕೃತಿ ಪರಿಚಯ | 1∗3=3 | 1∗3=3 | – | – | – | 06 |
| 7. ಛಂದಸ್ಸು | – | – | – | 1∗3=03 | – | 03 |
| 8. ಅಲಂಕಾರ | | – | – | 1∗3=03 | – | 03 |
| 9. ಗಾದೆಗಳು | | | | | 1∗3=3 | 03 |
| 10.ಕಂಠಪಾಠ | – | 1∗4=04 | – | – | – | 04 |
| 11.ಪದ್ಯವನ್ನು ಓದಿ ಅರ್ಥೈಸಿ ಉತ್ತರಿಸುವುದು | – | 1∗4=04 | – | – | – | 04 |
| 12.ಎಂಟು/ಹತ್ತು ವಾಕ್ಯಗಳ ಉತ್ತರಗಳು | 2∗4 =08 | 1∗4=04 | – | – | – | 12 |
| 13.ಪತ್ರ ಲೇಖನ | – | – | – | – | 1∗5=05 | 05 |
| 14.ಪ್ರಬಂಧ ರಚನೆ | – | – | – | – | 1∗5=05 | 05 |
| ಒಟ್ಟು | 30 | 30 | 07 | 20 | 13 | 100 |

# ನೀಲ ನಕಾಶೆ

| ಕ್ರ.ಸಂ | ಪಾಠದ ಹೆಸರು | ಜ್ಞಾನ | | | | ಗ್ರಹಿಕೆ | | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.2 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ವ.ನಿ | ಕಿ.ಉ.2 | ದೀ ಉ.1 | ದೀ.ಉ.2 | ದೀ.ಉ.3 | ದೀ.ಉ.2 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | | |
| 1 | ಶಬರಿ | | | 2(1) | | | | 2(1) | | | | | | | | | | 2(2) | | | | 4 | 2 |
| 2 | ಅಮೇರಿಕದಲ್ಲಿ ಗೊರೂರು | | 1(1) | | | | | | 3(1) | | | | | | | | 1(1) | | 3(1) | | | 4 | 2 |
| 3 | ಜೀವನ ದೃಷ್ಟಿ | | | | | | | | | | | | 4(1) | | | | | | | 4(1) | | 4 | 1 |
| 4 | ಧರ್ಮಸಮದೃಷ್ಟಿ | | 1(1) | | | | | 2(1) | | | | | | | | | 1(1) | 2(1) | | | | 3 | 2 |
| 5 | ಭಾಗ್ಯಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯ | | 1(2) | | | | | 2(1) | | | | | | | | | 1(2) | 2(1) | | | | 4 | 3 |
| 6 | ಎದೆಗೆ ಬಿದ್ದ ಅಕ್ಷರ | | | | | | | | | | | 3(1) | | | | | | | 3(1) | | | 3 | 1 |
| 7 | ವೃಕ್ಷಸಾಕ್ಷಿ | | | | | | | | | | | | 4(1) | | | | | | | 4(1) | | 4 | 1 |
| 8 | ವ್ಯಾಘ್ರಗೀತೆ | | 1(1) | | | | | | 3(1) | | | | | | | | 1(1) | | 3(1) | | | 4 | 1 |
| | **ಗದ್ಯ ಒಟ್ಟು** | | **1(5)** | **2(1)** | | | | **2(3)** | **3(2)** | | | **3(1)** | **4(2)** | | | | **1(5)** | **2(4)** | **3(3)** | **4(2)** | | **30** | **14** |
| 1 | ಎಮ್ಮನುಡಿಗೇಳ್ | | 1(1) | | | | | | 3(1) | | | | | | | | 1(1) | | 3(1) | | | 4 | 2 |
| 2 | ಹಕ್ಕಿ ಹಾರುತಿದೆ ನೋಡಿದಿರಾ | | | | 4(1) | | | | | | | | | | | | | | | 4(1) | | 4 | 1 |
| 3 | ಹಲಗಲಿ ಬೇಡರು | | | | | | | | 3(1) | | | | | | | | | | 3(1) | | | 3 | 1 |
| 4 | ವಚನ ಸೌರಭ | | | | | | | | | | | | | | 4(1) | | | | | 4(1) | | 4 | 1 |
| 5 | ಸಂಕಲ್ಪಗೀತೆ | | | 2(1) | | | | | | | 2(1) | | | | | | | 2(2 | | | | 4 | 2 |
| 6 | ಕೌರವೇಂದ್ರನ ಕೊಂದೆ ನೀನು | | | | | | | | | | | | 4(1) | | | | | | | 4(1) | | 4 | 1 |
| 7 | ವೀರಲವ | | 1(2) | | | | | 2(1) | | | | | | | | | 1(2) | 2(1) | | | | 4 | 3 |
| 8 | ಸಂಕಟಕೆ ಗಡಿ ಇಲ್ಲ | | | | | | | | 3(1) | | | | | | | | | | 3(1) | | | 3 | 1 |
| | **ಪದ್ಯ ಒಟ್ಟು** | | **1(3)** | **2(1)** | **4(1)** | | | **2(1)** | **3(3)** | | **2(1)** | | **4(1)** | | **4(1)** | | **1(3)** | **2(3)** | **3(3)** | **4(3)** | | **30** | **12** |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |

| | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ವಿಜ್ಞಾನ ಮತ್ತು ಸಮಾಜ | | | | | | | | | | 2(1) | | | | | | | 2(1) | | | | 2 | 1 |
| 2 | ನಾಮ ಫಲಕ | | 1(1) | | | | | | | | | | | | | | 1(1) | | | | | 1 | 1 |
| 3 | ಉದಾತ್ತ ಚಿಂತನೆಗಳು | | | | | | 1(1) | | | | | | | | | | 1(1) | | | | | 1 | 1 |
| 4 | ಪಾರಿವಾಳ | | 1(1) | | | | | | | | | | | | | | 1(1) | | | | | 1 | 1 |
| 5 | ಜನಪದ ಒಗಟುಗಳು | | | 2(1) | | | | | | | | | | | | | | 2(1) | | | | 2 | 1 |
| | **ಪೋಷಕ ಅಧ್ಯಯನ ಒಟ್ಟು** | | 1(2) | 2(1) | | | 1(1) | | | | 2(1) | | | | | | 1(3) | 2(2) | | | | 07 | 5 |
| 1 | ವ್ಯಾಕರಣ | 1(10) | | | | 1(4) | | | | | | | | | | 1(14) | | | | | | 14 | 14 |
| 2 | ಛಂದಸ್ಸು | | | | | | | | 3(1) | | | | | | | | | | 3(1) | | | 3 | 1 |
| 3 | ಅಲಂಕಾರ | | | | | | | | 3(1) | | | | | | | | | | 3(1) | | | 3 | 1 |
| 4 | ಗಾದೆ | | | | | | | | | | | 3(1) | | | | | | | 3(1) | | | 3 | 1 |
| 5 | ಪತ್ರ / ಪ್ರಬಂಧ | | | | | | | | | | | | | 5(2) | | | | | | | 5(2) | 10 | 2 |
| | **ಒಟ್ಟು** | 1(10) | | | | 1(4) | | | 3(2) | | | 3(1) | | 5(2) | | 1(14) | | | 3(3) | | 5(2) | 33 | 19 |
| | **ಸಮಗ್ರ ಒಟ್ಟು** | 1(10) | 1(10) | 3(2) | 4(1) | 1(4) | 1(1) | 2(4) | 3(7) | | 2(3) | 3(2) | 4(3) | 5(2) | 4(1) | 1(14) | 1(11) | 2(9) | 3(9) | 4(5) | 5(2) | 100 | 50 |
| | **ಶೇಕಡಾ ಪ್ರಮಾಣ** | 30 | | | | 34 | | | | 32 | | | | | 4 | 100 | | | | | | | |

# ಪ್ರಥಮ ಭಾಷೆ ಕನ್ನಡ

ಗರಿಷ್ಠ ಅಂಕ : ೧೦೦

# ಪ್ರಶ್ನೆ ಪತ್ರಿಕೆ

ಅವಧಿ : ೩ ಗಂಟೆಗಳು

**ಸೂಚನೆಗಳು :**

ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) ೬೭ ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು ೨೦ ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ ೧೩ ಅಂಕಗಳು

# ಭಾಗ – 'ಎ'

ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) ೬೭ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** ೧೧ * ೧ = ೧೧

೧. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳು ಯಾವುವು?

೨. ಬುಕ್ಕರಾಯನ ಹಿರಿಮೆ ಏನು?

೩. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?

೪. ವಿಶ್ವೇಶ್ವರಯ್ಯನವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?

೫. ಭಗವದ್ಗೀತೆಯನ್ನು ರಚಿಸಿದವರು ಯಾರು?

೬. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?

೭. ಯಜ್ಞಾಶ್ವವನ್ನು ಕಟ್ಟಿದಬರು ಯಾರು?

೮. ಮುನಿಸುತರು ಹೆದರಲು ಕಾರಣವೇನು?

೯. ನಾಮಫಲಕ ಎಲ್ಲಿದೆ?

೧೦. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?

೧೧. ಕ್ರಿಯಾ ಸ್ವಾತಂತ್ರ್ಯ ಎಂದರೇನು?

**ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ ೯ * ೨ = ೧೮**

೧೨. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

೧೩. ಶಬರಿಯು ರಾಮ – ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

೧೪. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

೧೫. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

೧೬. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಾಗಿದೆ?

೧೭. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

೧೮. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

೧೯. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ಹೇಳಿದ್ದಾರೆ?

೨೦. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** ೪ * ೩ = ೧೨

೨೧. " ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆಬೇಡ."

೨೨. " ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ."

೨೩. " ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ."

೨೪. " ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ."

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ.** ೨ * ೩ = ೬

೨೫. ಗೊರೂರು ರಾಮಸ್ವಾಮಿ ಅಯ್ಯಂಗಾರ್

೨೬. ಆದಿಕವಿ ಪಂಪ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** ೧ * ೪ = ೪

೨೭. ಯುಗ ಯುಗಗಳ ____________________

____________________________________

____________________________________

______________________________

_____________________ ನೋಡಿದಿರಾ

ಅಥವಾ

ಕಲುಷಿತವಾದೀ ____________________

______________________________

______________________________

_____________________ ಮುಟ್ಟೋಣ

ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪ * ೧ = ೪

೨೮. ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ?

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ?

ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ

ಮನೆಯೊಳಗೆ ಮನೆಯೊಡೆಯನಿಲ್ಲಾ

ಕೂಡಲಸಂಗಮದೇವಾ.

೧. ಈ ವಚನಭಾಗದಲ್ಲಿ ನೀವು ಮೆಚ್ಚುವ ಸಾಲುಗಳಾವುವು?

೨. ನೀವು ಆ ಸಾಲುಗಳನ್ನು ಮೆಚ್ಚಲು ಕಾರಣವೇನು?

೩. ಬಸವಣ್ಣನವರ ಈ ವಚನದಿಂದ ನಿಮ್ಮಲ್ಲಿ ಮೂಡಿದ ಭಾವನೆಗಳೇನು?

೪. ಬಸವಣ್ಣನವರು 'ಮನೆಯೊಳಗೆ ಮನೆಯೊಡೆಯನಿಲ್ಲ' ಎಂಬ ಅಭಿಪ್ರಾಯಕ್ಕೆ ಬರಲು ಕಾರಣವೇನು?

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨ * ೪ = ೮

೨೯. 'ವೃಕ್ಷಸಾಕ್ಷಿ' ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ? ವಿವರಿಸಿ.

ಅಥವಾ

ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾದ ಪ್ರಸಂಗವನ್ನು ಕುರಿತು ಬರೆಯಿರಿ.

೩೦. ಪಾಂಡವರು ಸೋದರರೆಂದು ತಿಳಿದ ಕರ್ಣನ ಮನಸ್ಥಿತಿಯನ್ನು ಕುರಿತು ಬರೆಯಿರಿ.

ಅಥವಾ

ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಸೆ ಆಮಿಷಗಳೇನು? ವಿವರಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪ = (೨+೨)

೩೧. ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು; ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ

ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ. ಸಾಹಿತ್ಯಿಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲೂ ಬಲ್ಲ. ಆದರೆ ಉಳಿದ ಹೃದಯಗಳ ಆಸೆಹಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು. ಏಕೆಂದರೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತದೆ. ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ. ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?

ಪ್ರಶ್ನೆಗಳು :

೧. ಉಳಿದವರ ಯೋಗಕ್ಷೇಮ ನೋಡಿಕೊಳ್ಳುವುದು ಅಂತರ್ಜೀವಿಗೆ ಸಮಸ್ಯೆಯಾಗಲು ಕಾರಣಗಳೇನು?

೨. ಅಂತರ್ಜೀವಿಯ ಲಕ್ಷಣಗಳನ್ನು ಪಟ್ಟಿಮಾಡಿರಿ.

# ಭಾಗ – 'ಬಿ'

## ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು – ೨೦ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

೧೦ * ೧ = ೧೦

೩೨. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(ಎ) ಗುಣಸಂಧಿ (ಬಿ) ವೃದ್ಧಿಸಂಧಿ (ಸಿ) ಜಶ್ತ್ವಸಂಧಿ (ಡಿ) ಆದೇಶಸಂಧಿ

೩೩. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಇರಬೇಕಾದ ಲೇಖನ ಚಿಹ್ನೆ :

(ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

೩೪. "ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ" ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿದಾಗ ಆಗುವ ರೂಪ:

(ಎ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು.

(ಬಿ)ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆದಿದೆ.

(ಸಿ)ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯದು.

(ಡಿ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯಲಿ.

೩೫. 'ಬಿನ್ನಹ' ಪದದ ತತ್ಸಮ ರೂಪವಿದು :

(ಎ) ಆಲಾಪನೆ (ಬಿ) ಆಜ್ಞಾಪನೆ (ಸಿ) ಪ್ರಲಾಪನೆ (ಡಿ) ವಿಜ್ಞಾಪನೆ

೩೬. 'ತಂದೆಯಪ್ಪುದಂ' ಪದವು ಈ ವಿಭಕ್ತಿಯಲ್ಲಿದೆ.

(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಚತುರ್ಥಿ

೩೭. "ಪಶ್ಚಿಮ ಘಟ್ಟದಲ್ಲಿ ಹಲವು ವಿಶೇಷವಾದ ಮರಗಳಿವೆ." ಈ ವಾಕ್ಯದಲ್ಲಿರುವ ಪರಿಮಾಣ ವಾಚಕ ಪದವಿದು.:

(ಎ) ಹಲವು (ಬಿ) ವಿಶೇಷ (ಸಿ) ಪಶ್ಚಿಮ (ಡಿ) ಮರ

೩೮. ಕೊಟ್ಟಿರುವ ಪದಗಳಲ್ಲಿ ಪೋರ್ಚುಗೀಸ್ ಪದಕ್ಕೆ ಉದಾಹರಣೆಯಿದು.:

(ಎ) ತಾಲೂಕು (ಬಿ) ಕಾಗದ (ಸಿ) ಮೇಜು (ಡಿ) ಗಲೀಜು

೩೯. “ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಈ ವಾಕ್ಯವು :

(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ (ಸಿ) ಸಂಯೋಜಿತ ವಾಕ್ಯ(ಡಿ) ಸಾಮಾನ್ಯ ವಾಕ್ಯ

೪೦. “ವಾಗರ್ಥನ ತಂದೆ ತಾಯಿಗಳು ಮಗನನ್ನು ಶಾಲೆಯವರೆಗೆ ಕರೆತಂದು ಬಿಟ್ಟರು.” ಈ ವಾಕ್ಯದಲ್ಲಿರುವ ತದ್ಧಿತಾಂತ ಅವ್ಯಯ ಪದ :

(ಎ) ಮಗನನ್ನು (ಬಿ) ಶಾಲೆಯವರೆಗೆ (ಸಿ) ಕರೆತಂದು (ಡಿ) ಬಿಟ್ಟರು

೪೧. ಕೊಟ್ಟಿರುವ ಧಾತುಗಳಲ್ಲಿ ಅಕರ್ಮಕಧಾತು ಪದವಿದು :

(ಎ) ಕೊಡು (ಬಿ) ಬಿಡು (ಸಿ) ಓಡು (ಡಿ) ನಾಡು

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.

೪ * ೧ = ೪

೪೨. ಹೊಸಗನ್ನಡ : ಕರ್ಮಧಾರಯ : : ಅಂಗೈ : ____________

೪೩. ಕಂದಪದ್ಯ : ಮಾತ್ರಾಗಣ : : ಚಂಪಕಮಾಲಾ ವೃತ್ತ : ____________

೪೪. ಮಾಡಿದ : ಕೃದಂತನಾಮ : : ಮಾಟ : ____________

೪೫. ಆದ್ದರಿಂದ : ಸಂಬಂಧಾರ್ಥಕ ಅವ್ಯಯ : : ಮೆಲ್ಲಗೆ : ____________

೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. ೧*೩=೩

ಏನು ಹೇಳೈ ಕರ್ಣ ಚಿತ್ತ

ಗ್ಲಾನಿ ಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ।

ಅಥವಾ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೊರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ।

೪೭. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿ. ೧ * ೩ =೩

"ಮಾರಿಗೌತಣವಾಯ್ತು ನಾಳಿನ ಭಾರತವು"

ಅಥವಾ

"ಸೀತೆಯ ಮುಖಕಮಲ ಅರಳಿತು"

## ಭಾಗ – 'ಸಿ'

### ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ ೧೩ ಅಂಕಗಳು

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧ * ೩ = ೩

- ಮನೆ ಗೆದ್ದು ಮಾರಿ ಗೆಲ್ಲು
- ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ
- ಉಪ್ಪು ತಿಂದ ಮನೆಗೆ ಎರಡು ಬಗೆಯ ಬೇಡ

೪೯. ನಿಮ್ಮ ಶಾಲೆಯಲ್ಲಿ ಆಚರಿಸಿದ ‘ವಿಶ್ವ ಪರಿಸರ ದಿನಾಚರಣೆ’ಯ ಕುರಿತು ವರದಿಯನ್ನು ಪ್ರಕಟಿಸುವಂತೆ ಕೋರಿ ‘ಪ್ರಜಾವಾಣಿ’ ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ. ೧ * ೫ = ೫

**ಅಥವಾ**

ಎಸ್.ಎಸ್.ಎಲ್.ಸಿ. ನಂತರದ ನಿಮ್ಮ ವಿದ್ಯಾಭ್ಯಾಸದ ನಿಲುವನ್ನು ಕುರಿತು ನಿಮ್ಮ ಕನ್ನಡ ಶಿಕ್ಷಕರಿಗೊಂದು ವಿವರಣಾತ್ಮಕ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.
೧ * ೫ = ೫

- ಮಂಗಳನ ಅಂಗಳದಲ್ಲಿ ಮಾನವ
- ಮಹಿಳೆಯರ ಮೇಲಾಗುತ್ತಿರುವ ಶೋಷಣೆ
- ಜಾಗತಿಕ ತಾಪಮಾನ

----೦ ----

# ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

## ವಿಷಯ : ದ್ವಿತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 80** **ಅವಧಿ : 2–30 ಗಂಟೆಗಳು**

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 34 | 27 |
| ಗ್ರಹಿಕೆ | 28 | 23 |
| ಅಭಿವ್ಯಕ್ತಿ | 34 | 27 |
| ಪ್ರಶಂಸೆ | 04 | 3 |
| ಒಟ್ಟು | 100 | 80 |

**2. ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು |
|---|---|---|
| ಗದ್ಯ | 31 | 25 |
| ಪದ್ಯ | 30 | 24 |
| ಪಠ್ಯ ಪೋಷಕ ಅಧ್ಯಯನ | 05 | 4 |

| | | |
|---|---|---|
| ವ್ಯಾಕರಣ<br>ವಾಕ್ಯ ರಚನೆ | 34 | 27 |
| ಒಟ್ಟು | 100 | 80 |

3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತುನಿಷ್ಠ | 15 | 12 | 12 | 20 ನಿ. |
| ಕಿರು ಉತ್ತರಗಳು (1) | 17 | 12 | 12 | 15 ನಿ. |
| ಕಿರು ಉತ್ತರಗಳು (2) | 25 | 22 | 11 | 30 ನಿ. |
| ದೀರ್ಘ ಉತ್ತರಗಳು (1) | 23 | 18 | 6 | 50 ನಿ |
| ದೀರ್ಘ ಉತ್ತರಗಳು (2) | 20 | 16 | 4 | 20 |
| ಒಟ್ಟು | 100 | 80 | 45 | 135 + 15 ನಿಮಿಷ |

4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% (24) | 50% (40) | 20% (16) | 100 % (80) |

5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12 * 1 = 12 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 12 ಪ್ರಶ್ನೆಗಳು | 12 * 1 = 12 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 11 ಪ್ರಶ್ನೆಗಳು | 11 * 2 = 22 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 6 ಪ್ರಶ್ನೆಗಳು | 6 * 3 = 18 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 * 4 = 08 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 * 4 = 08 |
| ಒಟ್ಟು | 45 ಪ್ರಶ್ನೆಗಳು | 80 ಅಂಕಗಳು |

6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ

ಗದ್ಯ : 25 ಪದ್ಯ : 24 ಪಠ್ಯ ಪೋಷಕ ಅಧ್ಯಯನ : 04

ವ್ಯಾಕರಣ, ಗಾದೆ ಮತ್ತು ವಾಕ್ಯರಚನೆ : 23, ಅಪಠಿತ ಗದ್ಯ : 4, ಒಟ್ಟು : 80, ಅವಧಿ : 2–30 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ+ ಅಪಠಿತಗದ್ಯ | ಒಟ್ಟು |
|---|---|---|---|---|---|---|
| 1. ಬಹು ಆಯ್ಕೆ | | | | 12 | | 12 |
| 2. ಅಪಠಿತ ಗದ್ಯ | | | | | 4 | 4 |
| 3. ಒಂದು ವಾಕ್ಯದ ಉತ್ತರಗಳು | 5 | 3 | | | | 08 |
| 4. ಮೂರು ನಾಲ್ಕು ವಾಕ್ಯಗಳ | 10 | 8 | 4 | | | 22 |

| | | | | | | |
|---|---|---|---|---|---|---|
| ಉತ್ತರಗಳು | | | | | | |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 3 | 3 | | | | 06 |
| 6. ಕವಿ ಕೃತಿ ವಿಚಾರ | 3 | 3 | | | | 6 |
| 7. ಗಾದೆಗಳು | | | | | 3 | 3 |
| 8. ಕಂಠಪಾಠ | | 3 | | | | 3 |
| 9. ಎಂಟು/ಹತ್ತು ವಾಕ್ಯಗಳ ಉತ್ತರಗಳು | 4 | 4 | | | | 08 |
| 10.ಪತ್ರ | | | | | 4 | 4 |
| 11. ಪ್ರಬಂಧ | | | | | 4 | 4 |
| ಒಟ್ಟು | 25 | 24 | 4 | 12 | 15 | 80 |

## ೬. ನೀಲ ನಕಾಶೆ

| ಕ್ರ.ಸಂ | ಪಾಠದ ಹೆಸರು | ಜ್ಞಾನ | | | ಗ್ರಹಿಕೆ | | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | ಕಿ.ಉ.1 | ದೀ.ಉ.2 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ವ.ನಿ | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | ದೀ.ಉ.1 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | | |
| 1 | ಒಣಮರದಗಿಳಿ | | | | | | | 3(1) | | | | | | | | | | 3(1) | | | 3 | 1 |
| 2 | ರಾಹುಲ್ ದ್ರಾವಿಡ್ | | 1(1) | | | | 2(1) | | | | | | | | | 1(1) | 2(1) | | | | 3 | 2 |
| 3 | ಗಾನಯೋಗಿ ಪುಟ್ಟರಾಜ ಗವಾಯಿ | | 1(1) | | | | | | | | 3(1) | | | | | 1(1) | | 3(1) | | | 4 | 2 |
| 4 | ಪಶ್ಚಿಮ ಘಟ್ಟಗಳ ಪತನ | | 1(2) | | | | 2(1) | | | | | | | | | 1(2) | 2(1) | | | | 4 | 3 |
| 5 | ಎಲ್ಲಿ ಹೋಗಿಯಾವೋ ಆ ಕಾಲ | | | | | | | | | | | 4(1) | | | | | | | 4(1) | | 4 | 1 |
| 6 | ಶಿಷ್ಯವತ್ಸಲ ರಾಮನ್ | | 1(1) | | | | 2(1) | | | | | | | | | 1(1) | 2(1) | | | | 3 | 2 |
| 7 | ನನ್ನ ಗೋಪಾಲ | | | | | | 2(1) | | | 2(1) | | | | | | | 2(2) | | | | 4 | 2 |
| | ಗದ್ಯ ಒಟ್ಟು | | **1(5)** | | | | **2(4)** | 3(1) | | 2(1) | | **4(1)** | | | | **1(5)** | **2(5)** | **3(2)** | **4(1)** | | **25** | 13 |
| | | | | | | | | | | | | | | | | | | | | | | |

| | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ಅರಿವು | | | | | | | | | | 3(1) | | | | | | | 3(1) | | | 3 | 1 |
| 2 | ನನ್ನ ಹಾಗೆಯೇ | | 1(1) | | | | 2(1) | | | | | | | | | 1(1) | 2(1) | | | | 3 | 2 |
| 3 | ಸವಿ ಚೈತ್ರ | | | | | | | 3(1) | | | | | | | | | | 3(1) | | | 3 | 1 |
| 4 | ಸದ್ದು ಮಾಡದಿರು | | | | | | 2(1) | | | | | | | | | | 2(1) | | | | 2 | 1 |
| 5 | ಗುರಿ | | | | | | | | | | | 4(1) | | | | | | | | | 4 | 1 |
| 6 | ಮಗು | | | | | | 2(1) | | | | | | | | | | 2(1) | | | | 2 | 1 |
| 7 | ವಚನಗಳು | | | | | | | | | | | | | 3(1) | | | | 3(1) | | | 3 | 1 |
| 8 | ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | | 1(2) | | | | 2(1) | | | | | | | | | 1(2) | 2(1) | | | | 4 | 3 |
| | **ಪದ್ಯ ಒಟ್ಟು** | | **1(3)** | | | | **2(4)** | **3(1)** | | | **3(1)** | **4(1)** | | **3(1)** | | **1(3)** | **2(4)** | **3(3)** | **4(1)** | | **24** | **11** |
| 1 | ಜೋಯಿಸರ ಕುರ್ಚಿ | | | 2(1) | | | | | | | | | | | | | 2(1) | | | | 2 | 1 |
| 2 | ಒಂದು ದಿನ ಹೀಗಾಯ್ತು | | | 2(1) | | | | | | | | | | | | | 2(1) | | | | 2 | 1 |
| | **ಪೋಷಕ ಅಧ್ಯಯನ ಒಟ್ಟು** | | | **2(2)** | | | | | | | | | | | | | 2(2) | | | | 4 | **2** |
| 1 | **ಅಪಠಿತ ಗದ್ಯ** | | | | | | | | | | | | | | | | | | | | | |
| | **ಅಪಠಿತ ಗದ್ಯ ಒಟ್ಟು** | | **1(3)** | | | 1(1) | | | | | | | | | | **1(4)** | | | | | 4 | **4** |
| 1 | ವ್ಯಾಕರಣ | 1(12) | | | | | | | | | | | | | 1(12) | | | | | | 12 | 12 |
| 3 | ಗಾದೆ | | | | | | | | | | **3(1)** | | | | | | | 3(1) | | | 3 | 1 |

| | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| 5 | ಪತ್ರ / ಪ್ರಬಂಧ | | | | | | | | | | | 4(2) | | | | | | | 4(2) | | 8 | 2 |
| | ಒಟ್ಟು | 1(12) | | | | | | | | | 3(1) | 4(2) | | | 1(12) | | | 3(1) | 4(2) | | 23 | 15 |
| | ಸಮಗ್ರ ಒಟ್ಟು | 12 | 11 | 4 | | | 16 | 6 | | 2 | 9 | 16 | | 3 | 12 | 12 | 22 | 18 | 16 | | 80 | 45 |
| | | | | | | | | | | | | | | | | | | | | | | |

# ದ್ವಿತೀಯ ಭಾಷೆ ಕನ್ನಡ

## ಪ್ರಶ್ನೆ ಪತ್ರಿಕೆ

ಗರಿಷ್ಠ ಅಂಕ : ೮೦ ಅವಧಿ : ೨-೩೦ ಗಂಟೆಗಳು

ಸೂಚನೆಗಳು :

ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) ೫೩ ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು ೧೨ ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ ೧೫ ಅಂಕಗಳು

## ಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) ೫೩ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೮ * ೧ = ೮

೧. ರಾಹುಲರ ಹೆಸರಿಗೆ 'ದ್ರಾವಿಡ್' ಎಂಬುದು ಸೇರಿದ್ದು ಹೇಗೆ?

೨. ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ 'ಪುಟ್ಟರಾಜು' ಬಯಕೆ ಯಾವುದಾಗಿತ್ತು?

೩. ಪ್ರವಾಸದ ಹಾವಳಿ ಹೆಚ್ಚಾಗಲು ಕಾರಣವೇನು?

೪. ರೈತರು ಅತಿಕ್ರಮಣ ಸಾಗುವಳಿ ಪ್ರಾರಂಭಿಸಲು ಕಾರಣವೇನು?

೫. ರಾಮನ್ನರು ಪ್ರತಿ ವಾರವೂ ವ್ಯಾಸಂಗದ ಗೋಷ್ಠಿಗಳನ್ನು ಏಕೆ ಏರ್ಪಡಿಸುತ್ತಿದ್ದರು?

೬. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆಯೇನು?

೭. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

೮. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆಂದು ಉತ್ತರ ಹೇಳುತ್ತಾನೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೧*೨=೨೨**

೯. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?

೧೦. ಪಶ್ಚಿಮಘಟ್ಟಗಳನ್ನು ಅತಿಯಾಗಿ ದೋಚಿದುದರಿಂದ ಉಂಟಾಗಿರುವ ನಾಲ್ಕು ಪರಿಣಾಮಗಳನ್ನು ಪಟ್ಟಿ ಮಾಡಿ.

೧೧. ರಾಮನ್ನರು ಯಾರೊಬ್ಬರ ಶಿಫಾರಸುಗಳನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ ಏಕೆ?

೧೨. ತಾಯಿಯು ಜೊತೆಗಿದ್ದರೆ ಬನವೇ ಸೊಗಸು ಎಂದು ಮಗುವಿಗನಿಸಿದ್ದು ಏಕೆ?

೧೩. ತಾಯಿಯು ಗೋಪಾಲನನ್ನು ಏಕೆ ಪ್ರಾರ್ಥಿಸಿದಳು?

೧೪. ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣವೇನು?

೧೫. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ನಿರ್ವಹಿಸಬೇಕೆನ್ನುತ್ತಾರೆ?

೧೬. ಕಂದಯ್ಯ ಅತ್ತಾರೆ ಉಂಟಾಗುವ ಆಶ್ಚರ್ಯದ ಸಂಗತಿಗಳನ್ನು ಜನಪದಕಾರರು ಹೇಗೆ ಬಣ್ಣಿಸಿದ್ದಾರೆ?

೧೭. ಒಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?

೧೮. ‘ನನ್ನ ಪಾಲಿನ ದೇವರು ನೀವು’ ಎಂದು ಅಪರಿಚಿತ ಹೆಣ್ಣೊಬ್ಬಳು ಲೇಖಕರಿಗೆ ನಮಸ್ಕರಿಸಲು ಕಾರಣವೇನು?

೧೯. ಎರಡನೆಯ ಬಾರಿ ಸಾವಿತ್ರಿ ದೂರವಾಣಿಯ ಕಡೆ ಓಡಿದ್ದು ಏಕೆ?

**ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. ೨ * ೩ = ೬**

೨೦. ‘ಅವರ ಜನಪ್ರಿಯತೆಗೆ ಬೇರೆ ಸಾಕ್ಷಿ ಬೇಡ”

೨೧. “ ಇದ್ದೀ, ನೀನು ಇದ್ದೀ ನೀನು ಇರಬೇಕು”

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨ * ೩ = ೬**

೨೨. ಆ.ರಾ.ಮಿತ್ರ

೨೩. ಬಸವರಾಜ ಸಾದರ

**ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ ೧ * ೩ = ೩**

೨೪. ನೀರ ಕಂಡಲ್ಲಿ ______________

______________________

______________________

__________________ ಕೂಡಲ ಸಂಗಮದೇವ

ಅಥವಾ

ಹಸುವಿದ್ದು _________________

______________________________

______________________________

____________________ ಚನ್ನಮಲ್ಲಿಕಾರ್ಜುನ

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **೨ * ೪ = ೮**

೨೫. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.

**ಅಥವಾ**

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೋಬೆಲ್‌ಗೆ ಸಮಾನ ಎನಿಸಿದ್ದು ಹೇಗೆ?

೨೬. ಮನುಜತೆಯ ಸಾರ್ಥಕತೆಗೆ ಕವಿ ಅಡಿಗರು ನೀಡಿರುವ ಸಲಹೆಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ವಿವರಿಸಿ.

**ಅಥವಾ**

ಜೀವನದ ಪರಮ ಗುರಿಯನ್ನು ಕುರಿತು ಅಡಿಗರು ನೀಡಿರುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ – ೧೨ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. ೧೨ * ೧ = ೧೨

೧. 'ನಿರಾಶ್ರಯ' ಪದದ ವಿರುದ್ಧಾರ್ಥಕ ರೂಪ :

(ಎ) ಆಶ್ರಯ (ಬಿ) ಅಶ್ರಯ (ಸಿ) ನಿನಗಾಶ್ರಯ (ಡಿ) ನಿರಾಶ್ರಿತ

೨. 'ದ್ವಿರುಕ್ತಿ' ಪದಕ್ಕೆ ಉದಾಹರಣೆ ಇದು :

(ಎ) ಸರಸರ (ಬಿ) ಓಡೋಡಿ (ಸಿ) ಮನೆಮಠ (ಡಿ) ಶಾಲೆಗೀಲೆ

೩. ಸವರ್ಣದೀರ್ಘ ಸಂಧಿಗೆ ಉದಾಹರಣೆ :

(ಎ) ಶಾಲೆಯಲ್ಲಿ (ಬಿ) ಪ್ರತ್ಯುತ್ತರ (ಸಿ) ದೇವಾಲಯ (ಡಿ) ರಮೇಶ

೪. 'ಸಂಸ್ಕೃತ' ಪದದ ತದ್ಭವ ರೂಪ :

(ಎ) ಸುಸಂಸ್ಕೃತ (ಬಿ) ಸಾಂಸ್ಕೃತಿಕ (ಸಿ) ಸಂಸ್ಕೃತಿ (ಡಿ) ಸಕ್ಕದ

೫. 'ಹೆಬ್ಬಾವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

(ಎ) ಕ್ರಿಯಾ (ಬಿ) ಕರ್ಮಧಾರಯ (ಸಿ) ದ್ವಂದ್ವ (ಡಿ) ಅಂಶಿ

೬. 'ವರ್ಷಗಳಿಂದ' ಪದವು ಈ ವಿಭಕ್ತಿಯಲ್ಲಿದೆ :

(ಎ) ಪ್ರಥಮ (ಬಿ) ತೃತೀಯ (ಸಿ) ಚತುರ್ಥಿ (ಡಿ) ಪಂಚಮಿ

೭. 'ಸಾಲಿ' ಪದದ ಗ್ರಾಂಥಿಕ ರೂಪ :

(ಎ) ಶಾಲೆ (ಬಿ) ಶಲೆ (ಸಿ) ಸಲಿ (ಡಿ) ಸಳಿ

೮. ಆರು ಪಾದ(ಸಾಲು)ಗಳುಳ್ಳ ಪದ್ಯವನ್ನು ಹೀಗೆ ಕರೆಯುತ್ತೇವೆ :

(ಎ) ದ್ವಿಪದಿ (ಬಿ) ತ್ರಿಪದಿ (ಸಿ) ಚೌಪದಿ (ಡಿ) ಷಟ್ಪದಿ

೯. 'ಸಾಗರದಂತೆ ಸೇನೆ' ಇಲ್ಲಿರುವ ಅಲಂಕಾರ :

(ಎ) ರೂಪಕ (ಬಿ) ಉಪಮಾ (ಸಿ) ಅನುಪ್ರಾಸ (ಡಿ) ಚಿತ್ರಕವಿತ್ವ

೧೦. 'ರೇವು' ಪದದ ಅರ್ಥ :

(ಎ) ಬಂದರು (ಬಿ) ಬರುವರು (ಸಿ) ಸಾಗಿಸು (ಡಿ) ದೊಡ್ಡದು

೧೧. ನಾಮ ಪದದ ಬದಲಾಗಿ ಬಳಸುವ (ಉಪಯೋಗಿಸುವ) ಪದವನ್ನು ಹೀಗೆ ಕರೆಯುತ್ತಾರೆ. :

(ಎ) ಕ್ರಿಯಾಪದ (ಬಿ) ಸರ್ವನಾಮ (ಸಿ) ಕರ್ಮಪದ (ಡಿ) ಸಮಾಸ

೧೨. ನುಡಿಗಟ್ಟಿಗೆ ಉದಾಹರಣೆಯಿದಯ :

(ಎ) ಬೆನ್ನುತಟ್ಟು (ಬಿ) ಜುಳುಜುಳು (ಸಿ) ಮತ್ತೆಮತ್ತೆ (ಡಿ) ಬೆಟ್ಟಗುಡ್ಡ

# ಭಾಗ – 'ಸಿ'

## ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ ೧೫ ಅಂಕಗಳು

೧. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧ * ३ = ३

- ಹಾಸಿಗೆ ಇದ್ದಷ್ಟು ಕಾಲು ಚಾಚು
- ಕೈಕೆಸರಾದರೆ ಬಾಯಿ ಮೊಸರು
- ಆಳಾಗಿ ದುಡಿಯಬಲ್ಲವ ಅರಸಾಗಿ ಆಳಬಲ್ಲ

೨. ಸಾಲು ಮರದ ತಿಮ್ಮಕ್ಕಳನ್ನು ಕುರಿತು ಮೈಸೂರಿನಲ್ಲಿರುವ ನಿಮ್ಮ ಗೆಳೆಯ ಸುರೇಶನಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬೆಂಳೂರಿನ ಅಶ್ವತ್ಥನಗರದ ಅರ್ಚನ ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯ ಬೀದಿ ದೀಪಗಳನ್ನು ಸರಿಪಡಿಸಿಕೊಡುವಂತೆ ಬೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಮನವಿಪತ್ರ ಬರೆಯಿರಿ. ೧*೪=೪

३. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.೧*೪=೪

- ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ
- ಸಂಪರ್ಕ ಮಾಧ್ಯಮಗಳು
- ಗಣಕಯಂತ್ರದ ಪ್ರಯೋಜನಗಳು

೪. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧*೪=೪

ಪವಾಡ, ಮೂಢನಂಬಿಕೆ, ಮಾಟಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಬೇಕು. ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗುವುದು ಸಶಧ್ಯವಿಲ್ಲ. ವಿಜ್ಞಾನಿ ತನ್ನ ಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು. ಸಂಶೋಧನೆ ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರದೆ ಜನರ ನಿತ್ಯಜೀವನದ ಸಮಸ್ಯೆಗಳೂ ಆತನ ಸಂಶೋಧನಾ ಕ್ಷೇತ್ರವಾಗಬೇಕು. ಹಲವಾರು ಅತಾರ್ಕಿಕವಾದ ನಡಾವಳಿಗಳಿಂದ ಸಮಾಜ ಅನ್ಯಾಯಕ್ಕೆ ಒಳಪಟ್ಟಿದ್ದು ಉಸಿರುಕಟ್ಟುವ ವಾತಾವರಣವಿದೆ. ಅದನ್ನು ಶುದ್ಧಗೊಳಿಸುವಲ್ಲಿ ವಿಜ್ಞಾನಿಗಳು ಇನ್ನೂ ಪ್ರಯತ್ನಿಸದೇ ಇರುವುದು ಸರಿಯಲ್ಲ.

೧. ವಿಜ್ಞಾನದ ಸಭೆ ಸಮ್ಮೇಲನಗಳಲ್ಲಿ ಚರ್ಚಿಸಬೇಕಾದ ಅಂಶಗಳು ಯಾವುವು?

೨. ಸಮಾಜದ ಮೇಲೆ ಬೀರುವ ಸಮಸ್ಯೆಗಳನ್ನು ಪರಿಹರಿಸಲು ವಿಜ್ಞಾನಿಗಳು ಮಾಡಬೇಕಾದ ಕಾರ್ಯವೇನು?

೩. ಸಮಾಜದಲ್ಲಿ ಉಸಿರು ಕಟ್ಟುವ ವಾತಾವರಣ ನಿರ್ಮಾಣವಾಗಲು ಕಾರಣವೇನು?

೪. ವಿಜ್ಞಾನಿಗಳ ಸಂಶೋಧನಾ ಕ್ಷೇತ್ರ ಯಾವುದಾಗಬೇಕು?

----- ೦ -----

# ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

## ವಿಷಯ : ತೃತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 80** **ಅವಧಿ : 2–30 ಗಂಟೆಗಳು**

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 34 | 27 |
| ಗ್ರಹಿಕೆ | 28 | 23 |
| ಅಭಿವ್ಯಕ್ತಿ | 34 | 27 |
| ಪ್ರಶಂಸೆ | 04 | 3 |
| ಒಟ್ಟು | 100 | 80 |

**2. ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು |
|---|---|---|
| ಗದ್ಯ | 31 | 25 |
| ಪದ್ಯ | 30 | 24 |
| ಪಠ್ಯ ಪೋಷಕ ಅಧ್ಯಯನ | 05 | 4 |
| ವ್ಯಾಕರಣ | 34 | 27 |
| ವಾಕ್ಯ ರಚನೆ | | |
| ಒಟ್ಟು | 100 | 80 |

### 3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತುನಿಷ್ಠ | | 12 | 12 | 20 ನಿ. |
| ಕಿರು ಉತ್ತರಗಳು (1) | | 14 | 14 | 15 ನಿ. |
| ಕಿರು ಉತ್ತರಗಳು (2) | | 20 | 10 | 30 ನಿ. |
| ದೀರ್ಘ ಉತ್ತರಗಳು (1) | | 18 | 6 | 50 ನಿ |
| ದೀರ್ಘ ಉತ್ತರಗಳು (2) | | 16 | 4 | 20 |
| ಒಟ್ಟು | 100 | 80 | 46 | 135 + 15 ನಿಮಿಷ |

### 4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% (24) | 50% (40) | 20% (16) | 100% (80) |

### 5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| | | |
|---|---|---|
